## ತಾರ್ಸಿ ಏರಿದ ಕಾರ್

ಸಾಮಾನ್ಯವಾಗಿ ಮನೆಯ ಷೆಡ್ಡಿನಲ್ಲಿ ಕಾರನ್ನು ನಿಲ್ಲಿಸುವುದು ಪದ್ಧತಿ. ಆದರೆ ಮನೆಯ ತಾರ್ಸಿಯ ಮೇಲೆ ಕಾರು ನಿಂತಿದ್ದು ನೋಡಿದರೆ ಚಕಿತವಾಗುವುದು ಸ್ವಾಭಾವಿಕ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು –ಬೆಂಗಳೂರು ಎನ್‌ಎಚ್ 48 ಹೆದ್ದಾರಿಯಲ್ಲಿ ಕೊಕ್ಕಡ ಕ್ರಾಸಿನ ಬಲ ಬದಿಯಲ್ಲಿ ತಾರ್ಸಿಯ ಮೇಲೆ ಕಾರೊಂದು ನಿಂತಿರುವುದು ಕಂಡರೆ ಚಕಿತರಾಗುತ್ತೀರಿ. ಆದರೆ ಇದು ನೈಜ ಕಾರಲ್ಲ ಅಪ್ಪಟ ಕಾರಿನ ಪ್ರತಿರೂಪ ಓವರ್ ಹೆಡ್ ವಾಟರ್ ಟ್ಯಾಂಕ್. ನೆಲದಿಂದ ತಾರ್ಸಿಯ ಮೇಲ್ತುದಿಯ ತನಕ ನಿರ್ಮಿಸಿರುವ ಕಂಬದ ಮೇಲೆ ವಾಟರ್ ಟ್ಯಾಂಕ್ ನಿಂತಿದೆ.

**-ಎಂ.ಎನ್ ಜೋಷಿ, ಮೈಸೂರು**





## ಕಾಶಿಯ ಮೊಬೈಲು ಶೌಚಾಲಯ

ಇತ್ತೀಚೆಗೆ ಉತ್ತರ ಪ್ರದೇಶದ ಅಲಹಾಬಾದ್‌ನ ಗಂಗಾ ಯಮುನಾ ಸರಸ್ವತಿ ನದಿಗಳ ತ್ರಿವೇಣಿ ಸಂಗಮಕ್ಕೆ ಪ್ರವಾಸ ಹೋಗಿಬಂದೆ. ಪುಣ್ಯಸ್ನಾನ ಮಾಡುವವರು ದಿನ ನಿತ್ಯ ಸಹಸ್ರ ಸಂಖ್ಯೆಯಲ್ಲಿ ಅಲ್ಲಿಗೆ ಹೋಗಿ ಬರುತ್ತಾರೆ. ಅಲ್ಲಿನ ನಮಾಮಿ ಗಂಗಾ ಸಮಿತಿಯು ಸಾರ್ವಜನಿಕರ ಅನುಕೂಲಕ್ಕೆ ಹಾಗೂ ತೀರ ಪ್ರದೇಶದಲ್ಲಿ ಶುಚಿತ್ವವನ್ನು ಕಾಪಾಡಲು ಮೊಬೈಲ್ ಶೌಚಾಲಯ ಘಟಕವನ್ನು ತೆರೆದಿದೆ. ಇಂಥದೊಂದು ಪ್ರಯತ್ನ ಮಾಡುವ ಮೂಲಕ ಸಮಿತಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ಈ ಮೊಬೈಲ್ ಶೌಚಾಲಯದಲ್ಲಿ ಪುರುಷರಿಗೆ, ಮಹಿಳೆಯರಿಗೆ ಒಂದೊಂದು ಪಾರ್ಶ್ವದಲ್ಲಿ ಪ್ರತ್ಯೇಕ ವ್ಯವಸ್ಥೆಯಿದೆ. ದರ್ಪಣಗಳೂ ಇವೆ. ಇದನ್ನು ಬಳಸುತ್ತಿರುವವರ ಸಂಖ್ಯೆ ನೋಡಿದರೆ ಸ್ವಚ್ಛ ಭಾರತ ಅಭಿಯಾನದ ಬಗ್ಗೆ ಸಾಕಷ್ಟು ಜನ ಜಾಗೃತಿ ಮೂಡುತ್ತಿದೆಯೆಂದೇ ಹೇಳಬಹುದು.

**- ಮ.ಗು.ಬಸವಣ್ಣ, ನಂಜನಗೂಡು**

## ಚಾಕ್ ಚಿತ್ತಾರ

ಚಿಕ್ಕಬಳ್ಳಾಪುರ ಜಿಲ್ಲೆಯ ಗೌರಿಬಿದನೂರಿನ ಮುದುಗೆರೆಯ ಸಚಿನ್ ಸಂಘೆ ವೃತ್ತಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್. ಪ್ರವೃತ್ತಿಯಲ್ಲಿ ಹವ್ಯಾಸಿ ಕಲಾವಿದ. ಚಾಕ್‌ನಲ್ಲಿ ಚಿತ್ತಾರ ಬಿಡಿಸುವುದು ಸಚಿನ್‌ರ ಹವ್ಯಾಸ.

ಶಾಲೆಗಳಲ್ಲಿ ಕಪ್ಪು ಹಲಗೆಯ ಮೇಲೆ ಬರೆಯಲು ಉಪಯೋಗಿಸುವ ಚಾಕ್‌ಪೀಸ್‌ನಲ್ಲಿ ಸೂಕ್ಷ್ಮವಾಗಿ ಸ್ಪಷ್ಟವಾಗಿ ಕಾಣಿಸುವಂತೆ ಚಿತ್ರ ರಚಿಸಿದ್ದಾರೆ. ಇದೊಂದು ನಿಜಕ್ಕೂ ಸವಾಲಿನ ಕೆಲಸ. ಕೃತಿಗಳು ಸೂಕ್ಷ್ಮ ಹಂತಕ್ಕೆ ಬಂದಂತೆಲ್ಲಾ ಹೆಚ್ಚು ಸಮಯ ಬೇಕಾಗುತ್ತದೆ. ಒಂದೊಂದು ಚಾಕ್ ಕೃತಿ ತಯಾರಾಗಲೂ 8–10 ಗಂಟೆ ಸಮಯ ಬೇಕು. ಯಾವುದೇ ಲೆನ್ಸ್ ಬಳಸದೆ ಬರಿಗಣ್ಣಿನಿಂದ ಚಿತ್ರಿಸುವುದು ಸಚಿನ್ ವಿಶೇಷತೆ. ಚಾಕ್‌ನಲ್ಲಿ ಅರಳಿದ ಈ ದಂಡಿಯಾತ್ರೆಯ ಚಿತ್ರ ರಚನೆಗೆ ತೆಗೆದುಕೊಂಡ ಸಮಯ ಮೂರು ತಿಂಗಳು.

ನಿರೀಕ್ಷೆಗೂ ಮೀರಿ ಅದ್ಭುತ ಕಲಾಕೃತಿಗಳನ್ನು ರಚಿಸುವ ಕೌಶಲ್ಯ ಹೊಂದಿರುವ ಸಚಿನ್ ದಂಡಿಯಾತ್ರೆಯಂತಹ ನೂರಕ್ಕೂ ಹೆಚ್ಚು ಕಲಾಕೃತಿಗಳನ್ನು ರಚಿಸಿದ್ದಾರೆ.

**- ಎ.ಎಸ್. ಹೂಲಗೇರಿ, ಅಂಕೋಲ**

